ಶ್ರೀ ಯು. ಆರ್. ಸಭಾಪತಿ: ಯಾವರೀತಿಯ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ದಯವಿಟ್ಟು ವಿವರಿಸುತ್ತೀರಾ?

ಶ್ರೀ ಎಸ್. ಆರ್. ಕಾಶಪ್ಪನವರ್ : ರೋಗಗ್ರಸ್ತ ಘಟಕಗಳನ್ನು ಗುರುತಿಸುವ ಕಾರ್ಯಕ್ರಮ ಮೊಟ್ಟಮೊದಲು ಅದು ಆಗಬೇಕಾಗಿದೆ. ರೋಗಗ್ರಸ್ತ ಕೈಗಾರಿಕೆಗಳನ್ನು ಗುರುತಿಸುವಂತಹ ಪ್ರಥಮ ಹಂತಕದ ಕಾರ್ಯಕ್ರಮ ನಡೆಯುತ್ತಿದೆ. ಅದು ಮುಗಿದ ತಕ್ಷಣ ಮುಂದಿನ ಕ್ರಮಗಳನ್ನು ನಾವು ಕೈಗೊಳ್ಳುತ್ತೇವೆ.

ಶ್ರೀ ಯು. ಆರ್. ಸಭಾಪತಿ : ನಿರ್ವಹಣೆಯಾಗದಿರತಕ್ಕ 352 ಮಳಿಗೆಗಳಲ್ಲಿ 263 ಕಾರ್ಯನಿರ್ವಹಿಸುತ್ತಿವೆಯೆಂದು ತಿಳಿಸಿದ್ದೀರಿ. ಸುಮಾರು 90 ಮಳಿಗೆಗಳು ಕಾರ್ಯನಿರ್ವಹಿಸುತ್ತಿಲ್ಲ. ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅವುಗಳನ್ನು ವಶಪಡಿಸಿಕೊಳ್ಳಲಿಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಎಸ್. ಆರ್. ಕಾಶಪ್ಪನವರ್ : ಯಾವ ಯಾವ ಕೆಲಸವನ್ನು ಪ್ರಾರಂಭ ಮಾಡಿಲ್ಲವೋ ಅವರಿಗೆ ಕಾನೂನಿನ ಪ್ರಕಾರ ನೋಟೀಸ್ ಕೊಟ್ಟು ಮುಂದಿನ ಕ್ರಮಗಳನ್ನು ಅವರ ಮೇಲೆ ಜರುಗಿಸಲಾಗುವುದು.

<u>ತಡೆ ಹಿಡಿಯಲಾದ ಪ್ರಶ್ನೆಗಳು</u>

ಗಂಗಾ ಕಲ್ಯಾಣ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ

56 (171) ಶ್ರೀ ಶಿವರಾಮು. ಬಿ (ಗಂಡಸಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿದ್ದ ಗಂಗಾ ಕಲ್ಯಾಣ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಮಾಡಿರುವುದು ನಿಜವೆ;

ಆ) ವರ್ಗಾವಣೆ ಮಾಡಿರುವುದರಿಂದ ದುರಸ್ಥಿ ಅವುಗಳ ಪುನಶ್ಚೇತನ ಮತ್ತು ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ತೆಗೆದುಕೊಂಡಿರುವ ಕ್ರಮವೇನು?

ಇ) ಹಾಸನ ಜಿಲ್ಲೆಯಲ್ಲಿ ಮೇಲಿನ ವಿಚಾರದಲ್ಲಿ ಕೈಗೊಂಡಿರುವ ಯೋಜನೆಗಳೆಷ್ಟು? ವರ್ಗಾವಣೆ ಮಾಡಿರುವ ಯೋಜನೆಗಳೆಷ್ಟು? ದುರಸ್ಥಿಗೆ ಹಾಕಿಕೊಂಡಿರುವ ಕ್ರಮವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಕೇಂದ್ರ ಪುರಸ್ಕೃತ ಗಂಗಾ ಕಲ್ಯಾಣ ಯೋಜನೆಯನ್ನು ಮಾತ್ರ ವರ್ಗಾಯಿಸಲಾಗಿದೆ. ಆದರೆ ಸಣ್ಣ ನೀರಾವರಿ ಇಲಾಖೆಯ ಮೂಲಕ ಜಿಲ್ಲಾ ಪಂಚಾಯತ್‌ಗಳು ಅನುಷ್ಠಾನಗೊಳಿಸಿದ ಯೋಜನೆಗಳನ್ನು ವರ್ಗಾಯಿಸಿರುವುದಿಲ್ಲ.

ಆ) ವರ್ಗಾವಣೆಯಾಗಿರುವ ಯೋಜನೆಗಳ ಪೈಕಿ ಅಗತ್ಯವಿರುವ ಘಟಕಗಳಿಗೆ ದುರಸ್ತಿ ಪುನಶ್ಚೇತನ ಮತ್ತು ಅಪೂರ್ಣಗೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಸಣ್ಣ ನೀರಾವರಿ ಇಲಾಖೆಯ ಮೂಲಕ ಜಿಲ್ಲಾ ಪಂಚಾಯತ್‌ಗಳು ಅನುಷ್ಠಾನಗೊಳಿಸಿರುವ ಯೋಜನೆಗಳು ವರ್ಗಾಯಿಸಲಾಗಲಿಲ್ಲ. ಆದರೂ ಹಾಸನ ಜಿಲ್ಲೆಯಲ್ಲಿ 43 ಯೋಜನೆಗಳು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದೆ ಎಂದು ವರದಿಯಾಗಿದೆ. ಸರ್ಕಾರಿ ಆದೇಶ ಸಂಖ್ಯೆ. ಎಸ್.ಡಬ್ಲ್ಯು.ಎಲ್ 229 ಎಸ್‌ಎಲ್‌ಪಿ 91, ದಿನಾಂಕ: 5.1.94ರ ಪ್ರಕಾರ ಇಂಥ ಯೋಜನೆಗಳು ಜಿಲ್ಲಾ ಪಂಚಾಯತ್ ಕಾರ್ಯವ್ಯಾಪ್ತಿಯಲ್ಲಿಮುಂದುವರಿಸಿರುವದರಿಂದ ಸದರಿ ಯೋಜನೆಗಳ ದುರಸ್ಥಿ ಜಿಲ್ಲಾ ಪಂಚಾಯತ್ ಹಾಸನವೇ ಮಾಡಬೇಕಾಗುತ್ತದೆ.

ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಮೂಲಭೂತವಾಗಿ 1994ರವರೆಗೆ ಒಟ್ಟಾರೆ ಗಂಗಾಕಲ್ಯಾಣ ಯೋಜನೆ ಕೇಂದ್ರ ಪರಿಷ್ಕೃತ ಗಂಗಾ ಕಲ್ಯಾಣ ಯೋಜನೆ ಇರಬಹುದು ರಾಜ್ಯವಲಯದ ಗಂಗಾಕಲ್ಯಾಣ ಯೋಜನೆ ಇರಬಹುದು ಅವುಗಳನ್ನು ಜಿಲ್ಲಾಪಂಚಾಯಿತಿಯಿಂದ ಅನುಷ್ಠಾನಗೊಳಿಸುತ್ತಿದ್ದರು ಎನ್ನುವುದು ಸರಿ. ತದನಂತರ 1994ರಲ್ಲಿ ಸರ್ಕಾರದಿಂದ ಒಂದು ಸುತ್ತೋಲೆಯನ್ನು ಹೊರಡಿಸುವುದರ ಮೂಲಕ ಕೇಂದ್ರ ಪುರಸ್ಕೃತ ಗಂಗಾ ಕಲ್ಯಾಣ ಯೋಜನೆಗಳನ್ನು ಮಾತ್ರ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ ಎನ್ನತಕ್ಕಂಥಾದ್ದನ್ನು ಹೇಳಿದ್ದೀರಿ. ಆದರೆ 1994ರ ನಂತರ ಏನು ಜಿಲ್ಲಾ ಪಂಚಾಯತ್‌ಗೆ ಹಣವನ್ನು ಗಂಗಾಕಲ್ಯಾಣ ಯೋಜನೆಗೆ ಒದಗಿಸುತ್ತಾ ಇದ್ದರೋ ಅದನ್ನು ಸರ್ಕಾರ ಏಕೆ ಕೈಬಿಟ್ಟಿದೆ ಎನ್ನತಕ್ಕದ್ದು ನನ್ನದು ಮೂಲಭೂತವಾದಂಥ ಪ್ರಶ್ನೆ. ಹೀಗೆ ಬಿಟ್ಟಿರತಕ್ಕಂಥ ಹಣದಲ್ಲಿ ಇವತ್ತು ತಾವು ಹೇಳಿದ ರೀತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಏನು ಅನುಷ್ಠಾನಗೊಳ್ಳುತ್ತಿದ್ದಂಥ ಗಂಗಾಕಲ್ಯಾಣ ಯೋಜನೆಗಳು ಇವೆ, ಅವು ಸ್ಥಗಿತಗೊಳ್ಳಲಿಕ್ಕೆ ಕಾರಣ ಏನು?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪಂಚಾಯತ್‌ನವರು ಅವರಿಗೆ ಇದ್ದಂಥ ವಿಶೇಷ ಘಟಕ ಯೋಜನೆ ಹಣದಲ್ಲಿ ಈ ಗಂಗಾಕಲ್ಯಾಣ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದರು. ಮತ್ತು ಕೇಂದ್ರ ಪುರಸ್ಕೃತ ಯೋಜನೆಯಿಂದ ಸಿಕ್ಕಿದಂಥ ಹಣದಿಂದಲೂ ಇದನ್ನು ಕಾರ್ಯಗತ ಮಾಡುತ್ತಿದ್ದರು. ಕೇಂದ್ರ ಪುರಸ್ಕೃತ ಯೋಜನೆಯಿಂದ ಕಾರ್ಯಗತ ಮಾಡಿರತಕ್ಕಂಥ ಯೋಜನೆಗಳನ್ನು ಮಾತ್ರ ನಮ್ಮ ಸಮಾಜ ಕಲ್ಯಾಣ ಇಲಾಖೆ ಅಭಿವೃದ್ಧಿ ನಿಗಮದಿಂದ ಮೇಲ್ವಿಚಾರಣೆಗೋಸ್ಕರವಾಗಿ ವರ್ಗಾವಣೆ ಮಾಡಿದ್ದಾರೆ. ಜಿಲ್ಲಾ ಪಂಚಾಯತ್‌ನವರು ತಮ್ಮ ಹಣದಿಂದ ವಿಶೇಷ ಘಟಕ ಯೋಜನೆಯಿಂದ ಕಾರ್ಯಗತ ಮಾಡತಕ್ಕಂಥ ಯೋಜನೆ ಏನಿದೆ ಅವುಗಳನ್ನು ವರ್ಗಾವಣೆ ಮಾಡಿಲ್ಲ. ಇದನ್ನು ಅವರೇ ನಿರ್ವಹಣೆ ಮಾಡಬೇಕು. ಆದರೂ ಕೂಡ ಈ ವಿಷಯ ಸರ್ಕಾರದ ಗಮನಕ್ಕೆ ಬಂದಮೇಲೆ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಏನಿದೆ ಎನ್ನುವುದನ್ನು ಸಂಗ್ರಹಣೆ ಮಾಡಿ ಇದರ ಬಗ್ಗೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎನ್ನುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಬಿ.ಶಿವರಾಮು : ಈಗ ವಿಶೇಷ ಘಟಕ ಯೋಜನೆಗೆ ತಾವು ಹಣವನ್ನು ಏನು ಎಲ್ಲಾ ಇಲಾಖೆಗಳಿಗೆ ಒದಗಿಸುತ್ತಿದ್ದೀರಿ ಅದು ಬಹುಶಃ ತಮಗೆ ಗೊತ್ತಿದೆ, ನಾಲ್ಕು ವರ್ಷಗಳಿಂದ ಒಟ್ಟಿಗೆ ಪೂಲ್ ಮಾಡುತ್ತಿದ್ದೀರಿ. ಆದರಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಕೂಡ ವಿಶೇಷವಾಗಿ ತೆಗೆದುಕೊಳ್ಳತಕ್ಕದ್ದು ಆಯಿತು. ಆದರೆ ಪೂಲ್‌ಮನಿಯಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಕೊಡತಕ್ಕಂಥ

ಸಂದರ್ಭದಲ್ಲಿ ಪೂರ್ಣ ಹಣ ಸಮಾಜ ಕಲ್ಯಾಣ ಇಲಾಖೆಗೆ ಕೊಡತಕ್ಕಂಥಾದ್ದು ಆಗುತ್ತಿದೆ. ಸಣ್ಣ ನೀರಾವರಿ ಇಲಾಖೆಯಿಂದ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರತಕ್ಕಂಥಾದ್ದಕ್ಕೆ ಹಣ ಸಿಗುತ್ತಿಲ್ಲ. ಹಾಗೆ ಇರುವಾಗ ಈಗ ಏನಾಗಿದೆಯೆಂದರೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಈ ಕಾರ್ಯವನ್ನು ಒಟ್ಟಾರೆ ಕೈಬಿಟ್ಟಿರತಕ್ಕಂಥಾದ್ದು ಜೊತೆಗೆ ಹಣ ಕೂಡ ಒದಗಿಸದೇ ಇರತಕ್ಕಂಥಾದ್ದು ಆಗಿದೆ. ಇವೆರಡನ್ನೂ ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕು. ನನ್ನ ಪ್ರಶ್ನೆ ಏನು ಎಂದರೆ, ಜಿಲ್ಲಾ ಪಂಚಾಯತ್‌ನಲ್ಲಿ ಕೆಲವು ಕಾಮಗಾರಿಗಳನ್ನು ಮಾಡುತ್ತಿದ್ದರು ಅವುಗಳು ಅಪೂರ್ಣಗೊಂಡಿರತಕ್ಕದ್ದನ್ನು ಪೂರ್ಣಗೊಳಿಸುವ ಕೆಲಸವನ್ನು ಅವುಗಳು ಮಾಡಿಲ್ಲ. ಇದ್ದಂಥ ಯೋಜನೆಗಳನ್ನು ದುರಸ್ತಿ ಮಾಡತಕ್ಕದ್ದು ಕೂಡ ಮಾಡಲಿಲ್ಲ. ಒಟ್ಟಾರೆ ನನ್ನ ಅಭಿಪ್ರಾಯ ಇಷ್ಟೆ. ಯಾವುದೇ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಇರಬಹುದು, ಅಥವಾ ರಾಜ್ಯವಲಯದ ಗಂಗಾಕಲ್ಯಾಣ ಯೋಜನೆ ಇರಬಹುದು. ಅದನ್ನು ತಮ್ಮ ಇಲಾಖೆಗೆ ವಹಿಸಿಕೊಳ್ಳುವುದರ ಮೂಲಕ ಹೀಗೆ ಆಗಿರತಕ್ಕಂಥ ಪುನಶ್ಚೇತನ, ದುರಸ್ತಿ, ಅಪೂರ್ಣಗೊಂಡಿರುವುದನ್ನು ಪೂರ್ಣಗೊಳಿಸುವಂಥಾದ್ದು ಮತ್ತು ಮುಂದಕ್ಕೂ ಕೂಡ ಇಲಾಖೆಯೇ ಮಾಡತಕ್ಕಂಥಾದ್ದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ತಮ್ಮ ಜತೆಯಲ್ಲಿ ನಾವು ಮುಕ್ತವಾಗಿ ಮಾತನಾಡಿದ್ದೇವೆ. ಹಾಸನ ಜಿಲ್ಲೆಯಲ್ಲಿ 43 ಯೋಜನೆಗಳು ಯಾವ ಹಂತದಲ್ಲಿವೆ ಮತ್ತು ಹೊಸ ಪ್ರಸ್ತಾವನೆಗಳು ಎಷ್ಟು ಬಂದಿವೆ ಎಂಬುದು ತಮಗೆ ಗೊತ್ತು. ತಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವುದನ್ನು ಹೇಳಿದ್ದೀರಿ. ಇದು ಕೇವಲ ಹಾಸನ ಜಿಲ್ಲೆಗಷ್ಟೇ ಸೀಮಿತವಾಗಬಾರದು. ಇಡೀ ರಾಜ್ಯಕ್ಕೆ ಎಲ್ಲ ಈ ರೀತಿಯ ಯೋಜನೆಗಳನ್ನು ಪೂರ್ಣಗೊಳಿಸತಕ್ಕಂಥ ಕ್ರಮವನ್ನು ತಾವು ಹಾಕಿಕೊಳ್ಳಬೇಕು. ಮತ್ತು ಅದಕ್ಕೆ ಸಂಪೂರ್ಣ ಹಣವನ್ನು ಒದಗಿಸುತ್ತೀರಾ ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯಮಟ್ಟದಲ್ಲಿ ಇದು ಪೂಲ್ ಮಾಡತಕ್ಕಂಥ ವ್ಯವಸ್ಥೆ ಇದೆ. ಜಿಲ್ಲಾ ಮಟ್ಟದಲ್ಲಿ ಪೂಲ್ ಮಾಡತಕ್ಕಂಥ ವ್ಯವಸ್ಥೆ ಇಲ್ಲ. ಜಿಲ್ಲಾ ಮಟ್ಟದಲ್ಲಿ ಪ್ರತಿಯೊಂದು ಇಲಾಖೆಯವರೂ ಕೂಡ ತಮಗೆ ಲಭ್ಯವಾಗುವಂಥ 18 ಪರ್ಸೆಂಟ್ ಹಣವನ್ನು ಆಯಾಯ ಇಲಾಖೆಯವರು ತೀರ್ಮಾನ ಮಾಡುವ ಕಾರ್ಯಕ್ರಮಗಳಿಗೆ ಖರ್ಚುಮಾಡುತ್ತಾರೆ. ಹಾಗೆಯೇ ಜಿಲ್ಲಾ ಮಟ್ಟದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಸಿಗತಕ್ಕಂಥ ಹಣದಿಂದ ಗಂಗಾಕಲ್ಯಾಣ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ. ಹಾಗೆ ಕಾರ್ಯಗತ ಮಾಡಿದ ಯೋಜನೆಯನ್ನು ಅವರ ಹಣದಿಂದಲೇ ನಿರ್ವಹಣೆ ಮಾಡಬೇಕಾದ ಜವಾಬ್ದಾರಿ ಇದೆ. ಈಗ ನಮ್ಮ ಇಲಾಖೆ ವಹಿಸಿಕೊಳ್ಳಬೇಕಾದರೆ ನಾವು ಜಿಲ್ಲಾಮಟ್ಟದಲ್ಲಿರತಕ್ಕಂಥ ಹಣವನ್ನು ಕೂಡ ಕ್ರೋಢೀಕರಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದು ಇವತ್ತು ನಮ್ಮಲ್ಲಿ ರಾಜ್ಯಮಟ್ಟದಲ್ಲಿ ನೀತಿಯ ಪ್ರಶ್ನೆ ಇದೆ. ಅದು ಇನ್ನೂ ತೀರ್ಮಾನ ಆಗಿಲ್ಲ. ಆದರೂ ಮಾನ್ಯ ಸದಸ್ಯರು ಹೇಳಿದ ಪ್ರಶ್ನೆ ಏನಿದೆ. ಒಂದು ವೇಳೆ ಅವರು ಗಂಗಾಕಲ್ಯಾಣ ಯೋಜನೆಯನ್ನು ಮುಟ್ಟುವುದಕ್ಕೇ ಹೋಗಬಾರದು. ಮುಟ್ಟುವುದಕ್ಕೆ ಹೋದಮೇಲೆ ನಿರ್ವಹಣೆಯನ್ನು ಅವರೇ ಮಾಡಬೇಕಾಗುತ್ತದೆ. ಈ ಪ್ರಶ್ನೆಯನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಸಣ್ಣ ನೀರಾವರಿ ಇಲಾಖೆಯಿಂದ ಆ ರೀತಿ ಮಾಡುವುದರ ಬದಲು ಆ ಹಣವನ್ನು ನಮ್ಮ ಪೂಲಿಗೆ ವಹಿಸಿಕೊಟ್ಟರೆ ಆವಾಗ ನಿರ್ವಹಣೆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಸಮಗ್ರವಾಗಿ ಪರಿಶೀಲನೆ ಮಾಡುತ್ತೇನೆ ಎಂದು ನಾನು ಹೇಳಿದ್ದೇನೆ.

ಅಧ್ಯಕ್ಷರು : ಡಿ.ಆರ್.ಪಾಟೀಲ್‌ರವರೇ ನಿಮ್ಮ ಪ್ರಶ್ನೆ : 129 (1300)ಕ್ಕೆ ಕಾಲಾವಕಾಶ ಬೇಕು ಎಂದು ಕೇಳಿದ್ದಾರೆ.